**OS: 115-15** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ K H Hegade, ವಕೀಲರಿಂದ ಃ**

3. ನನಗೆ ಈ ದಾವೆ ಯಾರು ಹಾಕಿದ್ದಾರೆಂದು ಗೊತ್ತಿದೆ. 1 ಹಾಗೂ 2 ನೇ ಪ್ರತಿವಾದಿಗಳ ಬಗ್ಗೆ ಮಾಹಿತಿ ಇದೆ. ಅವರಿಬ್ಬರು ವಾದಿಗಳ ಕುಟುಂಬದವರು. ಅವರಿಗೆ ನಿಖರವಾಗಿ ಏನು ಸಂಬಂಧ ಇದೆ ಎಂದು ನೆನಪಿಲ್ಲ. ನಾನು ಈ ಕೇಸಿನ ಬಗ್ಗೆ ಮಾಹಿತಿ ತಿಳಿದುಕೊಂಡು ಸಾಕ್ಷಿ ನುಡಿಯಲು ಬಂದಿದ್ದೇನೆ. ಈ ದಾವೆ ಏಕೆ ಹಾಕಿದ್ದಾರೆಂದು ತಿಳಿದುಕೊಂಡಿದ್ದೇನೆ. ವಾದಿಗಳು ಅನಕ್ಷರಸ್ಥರು ಮತ್ತು ಅವಿದ್ಯಾವಂತರು ಇದ್ದಾರೆ ಅಂದರೆ ಇರಬಹುದು. 6 ಮತ್ತು 7 ನೇ ವಾದಿಗಳು ಈ ದಾವೆ ಹಾಕುವ ಕಾಲಕ್ಕೆ ಆಗತಾನೆ ವಯಸ್ಕರರು ಆಗಿದ್ದರು, ಆ ಕಾರಣ ಅವರಿಗೆ ವ್ಯವಹಾರ ಜ್ಞಾನ ಇರಲಿಲ್ಲ ಅಂದರೆ ಸರಿಯಲ್ಲ.

4. ದಾವಾ ಆಸ್ತಿ ನಂಬರ ಯಾವುದು ಎಂದು ಕೇಳಿದರೆ ನನಗೆ ನೆನಪಿಲ್ಲ. ಅದು 158/6 ಇರಬಹುದು. ಅದರ ವಿಸ್ತೀರ್ಣ ಮತ್ತು ಅದು ಎಲ್ಲಿದೆ ಎಂದು ಗೊತ್ತಿದೆ. ಈಗ ಅದರ ಚಕ್ಕುಬಂದಿ ಹೇಳಲು ಬರುವುದಿಲ್ಲ ಏಕೆಂದರೆ ನಾನು ಬಹಳ ವರ್ಷಗಳ ಹಿಂದೆ ಅದನ್ನು ಖರೀದಿಸಿದ್ದೇನೆ.

5. ದಾವಾ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳು ಅಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಯ ಮೇಲೆ ಆ ಇಬ್ಬರು ಪ್ರತಿವಾದಿಯರು ಮತ್ತು ವಾದಿಯರು ಸಾಮೂಹಿಕ ಹಕ್ಕು ಮತ್ತು ಹಿತಾಸಕ್ತಿ ಹೊಂದಿದ್ದಾರೆ ಅಂದರೆ ಸರಿ.

6. ಮೃತ ಒಂದನೇ ವಾದಿ ಬಸವ್ವ ಇವಳು ಪ್ರತಿವಾದಿ-1 ಮತ್ತು 2 ಇವರ ಅಕ್ಕ ಅಂದರೆ ಸರಿ. ಎರಡನೇ ವಾದಿ ಅವರ ತಂಗಿ ಅಂದರೆ ಸರಿ. ಮೂರನೇ ವಾದಿ, ಎರಡನೇ ಪ್ರತಿವಾದಿ ಹೆಂಡತಿ ಮತ್ತು ಎಂಟನೇ ವಾದಿ, ಒಂದನೇ ಪ್ರತಿವಾದಿ ಹೆಂಡತಿ ಅಂದರೆ ಸರಿ. ನಾಲ್ಕನೇ ವಾದಿ ಎರಡನೇ ಪ್ರತಿವಾದಿಯ ಮಗಳು ಅಂದರೆ ಸರಿ. ಐದರಿಂದ ಏಳನೇ ವಾದಿಯರು ಎರಡನೇ ಪ್ರತಿವಾದಿ ಮಲ್ಲನಗೌಡನ ಮಕ್ಕಳು ಅಂದರೆ ಸರಿ. 9 ರಿಂದ 13 ನೇ ವಾದಿಯರು 1 ನೇ ಪ್ರತಿವಾದಿ ಗೆದ್ದನಗೌಡನ ಮಕ್ಕಳು ಅಂದರೆ ಸರಿ.

**OS: 115-15** **DW-1**

7. ಒಂದು ಹಾಗೂ ಎರಡನೇ ಪ್ರತಿವಾದಿಯರು ಕುಡಿತ ಮತ್ತು ದುಶ್ಚಟಗಳಿಗೆ ಬಲಿಯಾಗಿ ತಮ್ಮ ಆಸ್ತಿಯನ್ನು ಸಿಕ್ಕ ಸಿಕ್ಕವರಿಗೆ ವತ್ತಿ ಹಾಕಿ ಹಣ ಪಡೆದು ತಮ್ಮ ದುಶ್ಚಟಗಳಿಗೆ ಉಪಯೋಗಿಸುತ್ತಿದ್ದರು ಅಂದರೆ ಸರಿಯಲ್ಲ. ಆ ಕಾರಣ ಅವರು ತಮ್ಮ ಕುಟುಂಬಗಳ ಬಗ್ಗೆ ಯಾವುದೇ ಕಾಳಜಿ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ಅವರವರ ಮಕ್ಕಳು ವಯಸ್ಕರರಾದ ನಂತರ ಹೀಗೆ ಮಾಡಬೇಡಿ ಎಂದು ಹೇಳಿದರೂ ಸಹಿತ ಮತ್ತು ಹಿರಿಯರ ಮೂಲಕ ಹೇಳಿದರೂ ಸಹಿತ ಅವರು ತಮ್ಮ ಚಾಳಿ ಮುಂದುವರೆಸಿದ್ದರು ಅಂದರೆ ಸರಿಯಲ್ಲ. ಅದೇ ಕಾರಣ ವಾದಿಯರು ಅವರ ಮೇಲೆ ಅಸಲು ದಾವೆ ನಂಃ 241/10 ನೇದ್ದನ್ನು ದಾಖಲು ಮಾಡಿದ್ದರು ಅಂದರೆ ಸುಳ್ಳು. ಆ ಸಮಯದಲ್ಲಿ ವಾದಿಯರಿಗೆ ಗಜಾನನ ಅಣ್ವೇಕರ ಎನ್ನುವವ ಬೆಟ್ಟಿಯಾಗಿದ್ದ ಅವರ ಸಲಹಾಕಾರನಾಗಿದ್ದ ಅಂದರೆ ಸರಿಯಲ್ಲ. ಆ ದಾವೆ ಡಿಕ್ರಿ ಆಯಿತು ಅಂದರೆ ಇಲ್ಲ. ಅದು ಎಫ್ ಡಿ ಪಿ 37/11 ರಲ್ಲಿ ಆಸ್ತಿಗಳ ವಿಭಜನೆ ಆಯಿತು ಅಂದರೆ ನನಗೆ ಗೊತ್ತಿಲ್ಲ.

8. ಇಂತಹ ಸಂದರ್ಭದಲ್ಲಿ 1 ಮತ್ತು 2 ನೇ ಪ್ರತಿವಾದಿಯರ ಮೇಲೆ ಖುರ್ಷಿದ್ ಕಲಘಟಗಿ ಎನ್ನುವವರು ಅಸಲು ದಾವೆ ನಂಃ 217/11 ನೇದ್ದನ್ನು Specific Performance ದಾವೆ ದಾಖಲು ಮಾಡಿದ್ದರು ಅಂದರೆ ಹೌದು. ಆ ದಾವೆಯಲ್ಲಿ ವಾದಿಯರು ತಮ್ಮನ್ನು ಸಹ ಪಾರ್ಟಿ ಮಾಡಿ ಎಂದು ಅರ್ಜಿ ಹಾಕಿದ್ದರು ಅಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಮಾನ್ಯ ನ್ಯಾಯಾಲಯವು ದಾವೆ ಹಾಕಲು ಸ್ವಾತಂತ್ರ ಕೊಟ್ಟ ಕಾರಣ ವಾದಿಯರು ಈ ದಾವೆ ಹಾಕಿದ್ದಾರೆ ಅಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.